**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12**

ಸಂ:ಪಪೂಶಿಇ/ಪರೀಕ್ಷೆ/ನೋಂದಣಿ&ಫಲಿತಾಂಶ/2015-16. ದಿನಾಂಕ: 02-06-2016.

**ಸು ತ್ತೋ ಲೆ**

ವಿಷಯ: 2016ರ ಜುಲೈ ತಿಂಗಳಲ್ಲಿ ನಡೆಸುವ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಪುನರಾವರ್ತಿತ (Repeater) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಿ OMR ನಮೂನೆಯಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ 25-05-2016.

* * * * *

2016ರ ಜುಲೈ ತಿಂಗಳಲ್ಲಿ ನಡೆಸುವ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಸಂಬಂಧಿಸಿದ ಪುನರಾವರ್ತಿತ(Repeater) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಿ OMR ಅರ್ಜಿ ಸಲ್ಲಿಸುವ ಬಗ್ಗೆ ಉಲ್ಲೇಖಿತ ಸುತ್ತೋಲೆಯಲ್ಲಿ ವಿವರಗಳನ್ನು ನೀಡಲಾಗಿದೆ. ಸದರಿ OMR ಅರ್ಜಿಗಳನ್ನು ಕೆಳಕಂಡ ವಿಧಾನದಂತೆ ವಿಂಗಡಿಸಿ ಪ್ರತ್ಯೇಕ ಲಕೋಟೆಗಳಲ್ಲಿರಿಸಿ ಆಯಾ ಜಿಲ್ಲಾ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಲು ತಿಳಿಸಿದೆ.

1. ಅನುತ್ತೀರ್ಣ OMR ಅಂಕಪಟ್ಟಿಗಳಲ್ಲಿ ಭಾವಚಿತ್ರ ಮುದ್ರಿತವಾಗಿದ್ದರೂ ಸಹ ನಿಗದಿತ ಅಂಕಣದಲ್ಲಿ ಅಭ್ಯರ್ಥಿಗಳ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ನೈಜ ಭಾವಚಿತ್ರವನ್ನು ಕಡ್ಡಾಯವಾಗಿ ಅಂಟಿಸುವುದು. **ಭಾವಚಿತ್ರದ ಮೇಲೆ ಪ್ರಾಂಶುಪಾಲರು ಸಹಿ ಮಾಡಬಾರದು.**
2. OMR ಅಂಕಪಟ್ಟಿ ಆಧಾರದ ಮೇಲೆ ಪರೀಕ್ಷಾ ಶುಲ್ಕ ಕಟ್ಟಿದ ಹಳೆ ಪಠ್ಯ ಕ್ರಮ ಹಾಗು ಹೊಸ ಪಠ್ಯ ಕ್ರಮದ ಎಲ್ಲಾ ಪುನರಾವರ್ತಿತ ಅಭ್ಯರ್ಥಿಗಳಿಗೆ ಅರ್ಜಿ ಕ್ರಮ ಸಂಖ್ಯೆ (Application Serial Number) ಕಾಲಂನಲ್ಲಿ 1001 ರಿಂದ ಪ್ರಾರಂಭಿಸಿ ಸಂಖ್ಯೆಗಳನ್ನು ನೀಡಿ ಮುಂದುವರಿಸಿ ಸಂಖ್ಯೆಗಳಿಗನುಗುಣವಾಗಿ ಶೇಡಿಂಗ್ ಮಾಡಬೇಕು.
3. ಶುಲ್ಕ ಪಾವತಿಸಿದ ಅಭ್ಯರ್ಥಿಗಳ OMR ಅಂಕಪಟ್ಟಿಗಳನ್ನು ಟ್ಯಾಗ್ ಅಥವಾ ಪಿನ್ ಮಾಡದೆ ಅರ್ಜಿಗಳನ್ನು ಪಾಲಿಥಿನ್ ಕವರಿನಲ್ಲಿರಿಸಬೇಕು.
4. ಅಭ್ಯರ್ಥಿಗಳ ಮಾಹಿತಿಯನ್ನು OMR ಅಂಕಪಟ್ಟಿಗಳಲ್ಲಿ ಭರ್ತಿ ಮಾಡಿ ಶೇಡಿಂಗ್ ಮಾಡುವಲ್ಲಿ ಎಚ್ಚರ ವಹಿಸುವುದು.
5. OMR ಅಂಕಪಟ್ಟಿಗಳಿಲ್ಲದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದಲ್ಲಿ ಮೂಲ/ದ್ವಿಪ್ರತಿ MCAಗಳಲ್ಲಿ ಮಾಹಿತಿಗಳನ್ನು ಭರ್ತಿ ಮಾಡುವುದು. ಇಂತಹ ವಿದ್ಯಾರ್ಥಿಗಳ ಅರ್ಜಿಗಳಿಗೆ ಅರ್ಜಿ ಕ್ರಮ ಸಂಖ್ಯೆಯ (Application Serial Number) ಕಾಲಂನಲ್ಲಿ 3001 ರಿಂದ ನೀಡುವುದು.
6. ಜೆರಾಕ್ಸ್ ಮಾಡಿದ, ಟೈಪ್ ಮಾಡಿದ ಅಥವಾ ಕೈಬರಹದ MCA ಗಳನ್ನು ಬಳಸಿ ಪರೀಕ್ಷಾ ಅರ್ಜಿ ಮೇಲೆ ಶುಲ್ಕಗಳನ್ನು ಕಟ್ಟಿಸಿಕೊಳ್ಳಬಾರದು.
7. MCAಗಳಲ್ಲಿ ವಿದ್ಯಾರ್ಥಿಗಳ ಭಾವಚಿತ್ರ ಮುದ್ರಿತವಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಮೂರು ಭಾವಚಿತ್ರಗಳನ್ನು ಪಡೆದು ಕಾಲೇಜುಗಳಲ್ಲಿ ಕಾಯ್ದಿರಿಸಿಕೊಳ್ಳುವುದು.
8. ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳ ಯಾವುದಾದರೂ ವಿಷಯದಲ್ಲಿ/ಗಳಲ್ಲಿ ಫಲಿತಾಂಶ ತಿರಸ್ಕರಿಸಿ, ಪುನಃ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ನಿಯಮಾನುಸಾರ ಅವಕಾಶವಿರುತ್ತದೆ.
9. 2015ರ ಮಾರ್ಚ್, 2015 ಜುಲೈ ಹಾಗೂ 2016 ಮಾರ್ಚ್ ಪರೀಕ್ಷೆಗಳಲ್ಲಿ ಉತ್ತೀರ್ಣ ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸಿ ಪುನಃ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸಿದಲ್ಲಿ ಅಂತಹ ವಿದ್ಯಾರ್ಥಿಗಳ OMR ಅಂಕಪಟ್ಟಿ ಮತ್ತು ಉತ್ತೀರ್ಣ ಪ್ರಮಾಣ ಪತ್ರಗಳಲ್ಲಿ ಫಲಿತಾಂಶ ತಿರಸ್ಕರಿಸಲು ಇಚ್ಛಿಸಿದ ವಿಷಯಗಳನ್ನು 'ಶೇಡಿಂಗ್ ಮಾಡಿ / ಗುರುತು ಮಾಡಿ ಫಲಿತಾಂಶ ತಿರಸ್ಕರಣೆ ಅನ್ವಯಿಸುವ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು ಪಡೆದುಕೊಂಡು ಆಯಾ ಕಾಲೇಜಿನ ಪುನಾರವರ್ತಿತ ಅರ್ಜಿಗಳೊಂದಿಗೆ ಕಳುಹಿಸುವುದು.

10. ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆ ಮಾಡುವ ಸಂದರ್ಭದಲ್ಲಿ ಅರ್ಜಿ ನಮೂನೆಯಲ್ಲಿ ತಿಳಿಸಿರುವಂತೆ ₹.20/- ಛಾಪಾ ಕಾಗದದಲ್ಲಿ ನೋಟರಿ ಮುಂದೆ ಘೋಷಣೆ ಮಾಡಿದ ಮೂಲ ಪತ್ರವನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳಿಂದ ಪಡೆದುಕೊಳ್ಳುವುದು

11. ಫಲಿತಾಂಶ ತಿರಸ್ಕರಣೆಯ ಅನುಮತಿಗಾಗಿ ಯಾವ ವಿದ್ಯಾರ್ಥಿಗಳನ್ನು ಕೇಂದ್ರ ಕಛೇರಿಗೆ ಕಳುಹಿಸಬಾರದು ಪ್ರಾಚಾರ್ಯರ ಹಂತದಲ್ಲಿಯೇ ನಿಯಮಾನುಸಾರ ಪರಿಶೀಲಿಸಿ ಅನುಮತಿ ನೀಡುವುದು.

12. ಫಲಿತಾಂಶ ತಿರಸ್ಕರಿಸಲು ಕಳುಹಿಸುವಾಗ 30 ರಿಂದ 34 ಅಂಕಗಳು ದೊರೆತು ಉತ್ತೀರ್ಣಗೊಂಡಿರುವ ವಿಷಯಗಳ ಫಲಿತಾಂಶವನ್ನು ಸಹ ಕಡ್ಡಾಯವಾಗಿ ತಿರಸ್ಕರಿಸಬೇಕು. ಈ ನಿಯಮ ಭಾಗ-1 ಮತ್ತು ಭಾಗ-2ಕ್ಕೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ.

13. ಫಲಿತಾಂಶ ತಿರಸ್ಕರಣೆಗೆ ಅನುಮತಿ ನೀಡಿದ ಅನುತ್ತೀರ್ಣ **OMR** ಅಂಕಪಟ್ಟಿ-ವ-ಅರ್ಜಿಗಳಿಗೆ 1001 ರಿಂದ ಕ್ರಮ ಸಂಖ್ಯೆಯನ್ನು ನೀಡುವ ಪುನರಾವರ್ತಿತ ಅರ್ಜಿಗಳೊಂದಿಗೆ ಸೇರಿಸಿ ಸಂಖ್ಯೆಯನ್ನು ನೀಡಬೇಕು.

14. ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದು ಶುಲ್ಕ ಕಟ್ಟಿದ ವಿದ್ಯಾರ್ಥಿಗಳ **ಮೂಲ ಉತ್ತೀರ್ಣ** ಪ್ರಮಾಣ ಪತ್ರಗಳಿಗೆ ಅರ್ಜಿ ಕ್ರಮ ಸಂಖ್ಯೆ 4001 ರಿಂದ ಪ್ರಾರಂಭಿಸಿ ಪ್ರತ್ಯೇಕ ಬಂಚ್ ಮಾಡಬೇಕು.

15. **OMR** ಅಂಕಪಟ್ಟಿಗಳಿಲ್ಲದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದ **MCA** ಅರ್ಜಿಗಳಿಗೆ ಅರ್ಜಿ ಕ್ರಮ ಸಂಖ್ಯೆಯ (Application Serial Number) ಕಾಲಂನಲ್ಲಿ 3001 ರಿಂದ ನೀಡಿ ಪ್ರತ್ಯೇಕ ಲಕೋಟೆಯಲ್ಲಿರಿಸಿ ಸಲ್ಲಿಸುವುದು.

16. ಎಲ್ಲಾ ವರ್ಗದ ವಿದ್ಯಾರ್ಥಿಗಳು ಕಡ್ಡಾಯವಾಗಿ ಅಂಕಪಟ್ಟಿ ಶುಲ್ಕವನ್ನು ಪಾವತಿಸಬೇಕು. ಅಭ್ಯರ್ಥಿಗಳಿಂದ ಪಡೆದ ಎಲ್ಲಾ ಶುಲ್ಕವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ **"0202-01-102-1-07"**ಕ್ಕೆ ಚಲನ್ ಮೂಲಕ ಖಜಾನೆಗೆ ಜಮಾ ಮಾಡುವುದು.

17. ಶುಲ್ಕ ಸಂದಾಯ ಮಾಡಿದ ಎಲ್ಲಾ ಅರ್ಜಿಗಳನ್ನು ವಿದ್ಯಾರ್ಥಿ ಪಟ್ಟಿಯೊಂದಿಗೆ (FEE STATEMENT) ನೊಂದಿಗೆ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ **"ಪುನರಾವರ್ತಿತ ಅರ್ಜಿಗಳು"** (REPEATERS' APPLICATIONS) ಎಂದು ಬರೆದು ದಿನಾಂಕ 08-06-2016 ರೊಳಗಾಗಿ ಸಲ್ಲಿಸುವುದು.

18. ಹಳೆಪಠ್ಯ ಕ್ರಮದ ಪುನರಾವರ್ತಿತ ಅಭ್ಯರ್ಥಿಗಳಿಗೆ ಹಳೆಪಠ್ಯ ಕ್ರಮದಂತೆ ಮತ್ತು ಹೊಸಪಠ್ಯ ಕ್ರಮದ ಪುನರಾವರ್ತಿತ ಅಭ್ಯರ್ಥಿಗಳಿಗೆ ಹೊಸಪಠ್ಯ ಕ್ರಮದಂತೆ ಪರೀಕ್ಷೆ ನಡೆಸಲಾಗುವುದು.

ಪುನರಾವರ್ತಿತ ಅರ್ಜಿ ಮತ್ತು ಪರೀಕ್ಷಾ ಶುಲ್ಕ ವಿವರಗಳ ನಮೂನೆ (Repeaters' Fee Statement)

| ಅರ್ಜಿ ಸಂಖ್ಯೆ | ವಿದ್ಯಾರ್ಥಿಯ ಹೆಸರು | ಕಳೆದ ಬಾರಿ ಪರೀಕ್ಷೆ ತೆಗೆದುಕೊಂಡ ನೋಂದಣಿ ಸಂಖ್ಯೆ, ವರ್ಷ ಮತ್ತು ತಿಂಗಳು | ಪರೀಕ್ಷಾ ಶುಲ್ಕ ಸಂದಾಯ ಮಾಡಿದ ವಿಷಯಗಳ ವಿವರ | ಪರೀಕ್ಷಾ ಶುಲ್ಕ ಪಾವತಿಸಿದ ವಿವರ | | | | |
|---|---|---|---|---|---|---|---|---|
| | | | | ಶುಲ್ಕ ಪಡೆದ ದಿನಾಂಕ | ಶುಲ್ಕ ₹. | ದಂಡ ಶುಲ್ಕ ₹. | ಮೊತ್ತ ₹. | ಚಲನ್ ಸಂಖ್ಯೆ |
| 1 | 2 | 3 | 4 | 5 | 6 | 7 | 9 | 10 |
| | | | | | | | | |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಯನ್ನು:**

1. ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪಪೂಶಿಇ. (ಅಂತರ್ ಜಾಲದಲ್ಲಿ ಪ್ರಕಟಿಸಲು).
4. ಹೆಚ್ಚುವರಿ ಮತ್ತು ಕಛೇರಿ ಪ್ರತಿ.